KABR500000762016

**<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊಸಕೋಟೆ</u>**

**<u>: ಉಪಸ್ಥಿತರು</u> :**

**ಶ್ರೀಮತಿ ಶಿಲ್ಪಶ್ರೀ ಎನ್. ಎಸ್., ಬಿ.ಎ.ಎಲ್., ಎಲ್.ಎಲ್.ಬಿ.,**

**<u>ದಿನಾಂಕ 9 ನೇ ಜೂನ್ ಮಾಹೆ 2026 ರಂದು</u>**

**<u>C.C.20/2016</u>**

**ಫಿರ್ಯಾದುದಾರರು :** ಸರ್ಕಾರದ ಪರವಾಗಿ ತಿರುಮಲಶೆಟ್ಟಿಹಳ್ಳಿ ಪೋಲೀಸ್ ಠಾಣೆ,
(ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು )

**- ವಿರುದ್ಧ -**

**ಆರೋಪಿತರು :**

ಎ 1. ನಾಗರಾಜಪ್ಪ,
ಬಿನ್ ಹೊಟ್ಟೆಪ್ಪ,
ವಯಸ್ಸು: 58 ವರ್ಷ.

ಎ 2. ಶ್ರೀನಿವಾಸ,
ಬಿನ್ ನಾಗರಾಜಪ್ಪ,
ವಯಸ್ಸು: 35 ವರ್ಷ.

ಎ 3. ಮುನಿಯಪ್ಪ,
ಬಿನ್ ಲೇ.ನಾಗಪ್ಪ,
ವಯಸ್ಸು: 35 ವರ್ಷ.(abated)

ಎ 4. ನಾರಯಣಸ್ವಾಮಿ,
ಬಿನ್ ಕಲ್ಲಪ್ಪ,

ವಯಸ್ಸು: 38 ವರ್ಷ.

ಎ 5. ಮಂಜುನಾಥ,
ಬಿನ್ ಮುನಿಚಿಕ್ಕಪ್ಪ,
ವಯಸ್ಸು: 35 ವರ್ಷ.

ಎ 6. ಭತ್ರಪ್ಪ,
ಬಿನ್ ಮುನಿಚಿಕ್ಕಪ್ಪ,
ವಯಸ್ಸು: 32 ವರ್ಷ.

1 ರಿಂದ 6 ನೇ ಆರೋಪಿಗಳ ವಾಸಃ
ಜಿನ್ನಾಗರ ಗ್ರಾಮ,
ಜಡಿಗೇನಹಳ್ಳಿ ಹೋಬಳಿ,
ಹೊಸಕೋಟೆ ತಾಲೂಕು.

(ಆರೋಪಿಗಳ ಪರವಾಗಿ ಶ್ರೀ.ವಿ.ಎಸ್., ವಕೀಲರು )

| | |
|---|---|
| ಕೃತ್ಯ ನಡೆದ ದಿನ | **21.11.2014** |
| ವರದಿ ಮಾಡಿದ ದಿನಾಂಕ | **21.11.2014** |
| ಫಿರ್ಯಾದಿ | ಶ್ರೀ. ಮಂಜುನಾಥ |
| ಆರೋಪಿಸಲಾದ ಕಲಂಗಳು | **143, 147, 447, 504, 506**<br>ಸಹವಾಚಕ **149** ಐಪಿಸಿ |
| ಸಾಕ್ಷ್ಯ ಪ್ರಾರಂಭವಾದ ದಿನ | **27.05.2026** |
| ಸಾಕ್ಷ್ಯ ಮುಕ್ತಯವಾದ ದಿನ | **27.05.2026** |
| ತೀರ್ಪಿನ ದಿನಾಂಕ | **09.06.2026** |
| ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ತಪ್ಪಿತಸ್ಥರಲ್ಲವೆಂದು |

**Sd/-**
2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ನ್ಯಾಯಾಲಯ.,
ಹೊಸಕೋಟೆ.

**:: ತೀರ್ಪು ::**

ಪೊಲೀಸ್ ನಿರೀಕ್ಷಕರು, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ, ಹೊಸಕೋಟೆ ತಾಲ್ಲೂಕು ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.**143, 147, 447, 504, 506** ಸಹವಾಚಕ **149** ರಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಆಪಾದಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ**

ದಿನಾಂಕ **21/11/2014** ರಂದು ಬೆಳಿಗ್ಗೆ **8.00** ಗಂಟೆಯಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಗೊಳಪಡುವ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಸರಹದ್ದು ಜಿನ್ನಾಗರ ಗ್ರಾಮದಲ್ಲಿ **1** ರಿಂದ **6** ನೇ ಆರೋಪಿಗಳು ಏಕ್ಕೋದ್ದೇಶದಿಂದ ಗುಂಪುಕಟ್ಟಿಕೊಂಡು ಚಾ.ಸಾ.**1** ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಜಮೀನಿಗೆ ನಿರ್ಮಿಸಿದ್ದ ಬೇಲಿ ಕಾಂಪೌಂಡನ್ನು ಕಿತ್ತುಹಾಕುತ್ತಿದ್ದು ಚಾ.ಸಾ.**1** ಕೇಳಲು ಹೋದಾಗ ಸೂಳೆಮಗನೆ, ಬೋಳಿಮಗನೆ ಇತ್ಯಾದಿ ಅವಾಚ್ಯಶಬ್ದಗಳಿಂದ ಬೈದು, ಬೇಲಿ ಗಿಡದಲ್ಲಿ ಹಾಕಿ ಸುಟ್ಟು ಹಾಕುವುದಾಗಿ ಪ್ರಾಣ ಬೆದರಿಕೆ ಪ್ರಾಣಬೆದರಿಕೆ ಹಾಕಿರುತ್ತೀರಿ ಎಂದು ಆರೋಪಿತರು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. **143, 147, 447, 504, 506** ಸಹವಾಚಕ **149** ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಆಪಾದಿಸಲಾಗಿದೆ.

**3.** ಚಾಸಾ-**1** ರವರ ದೂರಿನ ಆಧಾರದ ಮೇಲೆ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ, ಹೊಸಕೋಟೆ ಇವರು ಮೊಕದ್ದಮೆ ಸಂಖ್ಯೆ. **156/2014** ಭಾರತೀಯ ದಂಡ ಸಂಹಿತೆ ಕಲಂ. **143, 147, 447 504, 506** ಸಹವಾಚಕ **149** ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸಾಕ್ಷಿದಾರರ ಸಮ್ಮುಖದಲ್ಲಿ ಸ್ಥಳ ಮಹಜರ್ ತಯಾರಿಸಿರುತ್ತಾರೆ. ತನಿಖಾಧಿಕಾರಿಗಳು ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡು, ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. **143, 147, 447, 504, 506** ಸಹವಾಚಕ **149** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳನ್ನು ಮಾಡಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. **3** ನೇ ಆರೋಪಿಯು ಮರಣ ಹೊಂದಿರುವುದರಿಂದ ಅವರನ್ನು ಈ ಪ್ರಕರಣದಿಂದ abated ಮಾಡಲಾಗಿದೆ.

**4.** ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಭಾರತೀಯ ದಂಡ ಸಂಹಿತೆ ಕಲಂ. **143, 147, 447, 504, 506** ಸಹವಾಚಕ **149** ರಡಿಯಲ್ಲಿ ಮಾಡಲಾದ ಅಪರಾಧದ

ಬಗ್ಗೆ ಆರೋಪಿತರ ವಿರುದ್ಧ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ, ಜಾಮೀನು ಪಡೆದುಕೊಂಡಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ **207** ರ ಪ್ರಕಾರ ದೋಷಾರೋಪಣಾ ಪಟ್ಟಿಯ ನಕಲುಗಳನ್ನು ಪೂರೈಸಲಾಯಿತು.

**5.** ಆರೋಪಿತರ ಪರ ವಕೀಲರ ಮತ್ತು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಿದ ನಂತರ ಭಾರತೀಯ ದಂಡ ಸಂಹಿತೆ ಕಲಂ.**143, 147, 447, 504, 506** ಸಹವಾಚಕ **149** ರಡಿಯಲ್ಲಿ ದೋಷಾರೋಪಣೆಯನ್ನು ತಯಾರಿಸಿ ಆರೋಪಿತರಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಯಿತು. ಆರೋಪಿತರು ತಮ್ಮ ವಿರುದ್ದ ಮಾಡಿದ ಆರೋಪಣೆಯನ್ನು ನಿರಾಕರಿಸಿರುತ್ತಾರೆ ಮತ್ತು ವಿಚಾರಣೆಯಾಗಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಆದಕಾರಣ ಅಭಿಯೋಜನೆಯವರಿಗೆ ಸಾಕ್ಷಿದಾರರ ವಿಚಾರಣೆ ಮಾಡುವಂತೆ ಸೂಚಿಸಲಾಗಿದೆ.

**6.** ಆರೋಪಿತರು ತಮ್ಮ ವಿರುದ್ದ ಮಾಡಲಾದ ದೋಷಾರೋಪಣೆಯನ್ನು ಒಪ್ಪಿಕೊಳ್ಳದ ಕಾರಣ ಅಭಿಯೋಜನ ಪಕ್ಷದವರು ಆರೋಪಿತರ ವಿರುದ್ಧ ಮಾಡಲಾದ ದೋಷಾರೋಪಣೆಯನ್ನು ಸಿದ್ಧಪಡಿಸಲು, ಈ ಪ್ರಕರಣದಲ್ಲಿ ಚಾಸಾ-**1** ರವರನ್ನು ಪ್ರಾಸಾ-**1** ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ ಹಾಗೂ **1** ದಾಖಲೆಗಳನ್ನು ನಿಶಾನೆ ನಿಪಿ-**1** ದೂರು ಎಂದು, ಪಂಚನಾಮೆಯನ್ನು ನಿಪಿ-**2** ಎಂದು ದಾಖಲಿಸಿಕೊಂಡಿರುತ್ತಾರೆ. ಪ್ರಾಸಾ-**1** ರವರು ಅಭಿಯೋಜನ ಪಕ್ಷದವರ ಪರವಾಗಿ ಸಾಕ್ಷ್ಯ ನುಡಿಯದೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ, ಅವರನ್ನು ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಲ್ಪಟ್ಟಿರುವುದರಿಂದ ಇತರ ಸಾಕ್ಷ್ಯಗಳನ್ನು ವಿಚಾರಣೆ ಮಾಡಿದರೂ ಯಾವುದೇ ಪ್ರಯೋಜನವಿಲ್ಲವೆಂದು ಭಾವಿಸಿ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕೆಂಬ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಳ್ಳಿ ಹಾಕಲಾಯಿತು. ಆರೋಪಿತರ ವಿರುದ್ಧ ಅಭಿಯೋಜನ ಪಕ್ಷದವರು ಮಂಡಿಸಿದ ಮೌಖಿಕ ಸಾಕ್ಷ್ಯದಲ್ಲಿ ಯಾವುದೇ ವಿರುದ್ದವಾದ ಸಾಕ್ಷ್ಯವಿಲ್ಲದ ಕಾರಣ ದಂ.ಪ್ರ.ಸಂ. ಕಲಂ **313** ರ ಅಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಕೈಬಿಡಲಾಯಿತು. ಆರೋಪಿತರು ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯ ಅಥವಾ ದಾಖಲಾತಿಗಳ ಸಾಕ್ಷ್ಯ ಹಾಜರುಪಡಿಸಿರುವುದಿಲ್ಲ.

**7.** ಉಭಯತ್ರರ ವಾದವನ್ನು ಕೇಳಲಾಗಿದೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿದೆ**.**

**8.** <u>ಈ ನ್ಯಾಯಾಲಯ ನಿರ್ಧರಿಸಬೇಕಾದ ಅಂಶಗಳೇನೆಂದರೆಃ</u> .

**1.**ದಿನಾಂಕ **21/11/2014** ರಂದು ಬೆಳಿಗ್ಗೆ **8.00** ಗಂಟೆ ಸಮಯದಲ್ಲಿ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಸರಹದ್ದು ಜಿನ್ನಾಗರ ಗ್ರಾಮದಲ್ಲಿ ಏಕ್ಕೋದ್ದೇಶ ಸಾಧಿಸುವ ಸಲುವಾಗಿ **1** ರಿಂದ **6** ನೇ ಆರೋಪಿಗಳಾದ ನೀವುಗಳು ಏಕ್ಕೋದ್ದೇಶ ಸಾಧಿಸುವ ಸಲುವಾಗಿ ಚಾ**.**ಸಾ**.1** ರವರ ಜಮೀನಿಗೆ ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು ಗಲಾಟೆ ಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ**.143** ಸಹವಾಚಕ **149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸುತ್ತಾರೆಯೇ**?**

**2.** ಮೇಲೆ ಹೇಳಿದ ದಿನಾಂಕ**,** ಸಮಯ ಹಾಗೂ ಸ್ಥಳದಲ್ಲಿ**, 1** ರಿಂದ **6** ನೇ ಆರೋಪಿಗಳಾದ ನೀವುಗಳು ಗುಂಪುಕಟ್ಟಿಕೊಂಡು ಚಾ**.**ಸಾ**.1** ರವರ ಜಮೀನಿನಲ್ಲಿ ದೊಂಬಿಯನ್ನು ಉಂಟು ಮಾಡಿರುವುದರಿಂದ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ**.147** ಸಹವಾಚಕ ಕಲಂ**.149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸುತ್ತಾರೆಯೇ**?**

**3.** ಮೇಲೆ ಹೇಳಿದ ದಿನಾಂಕ**,** ಸಮಯ ಹಾಗೂ ಸ್ಥಳದಲ್ಲಿ**,** ಆರೋಪಿಗಳಾದ ನೀವು ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ತಂಟೆ ತೆಗೆದು**, 1** ರಿಂದ **6** ನೇ ಆರೋಪಿಗಳಾದ ನೀವುಗಳು ಅತಿಕ್ರಮ ಪ್ರವೇಶ ಮಾಡಿದ್ದರಿಂದ ಆ ಮೂಲಕ ಭಾರತೀಯ ದಂಡ ಸಂಹಿತೆ

ಕಲಂ **447** ಸಹವಾಚಕ ಕಲಂ**. 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸುತ್ತಾರೆಯೇ**?**

**4.** ಮೇಲೆ ಹೇಳಿದ ದಿನಾಂಕ**,** ಸಮಯ ಹಾಗೂ ಸ್ಥಳದಲ್ಲಿ**,** ಆರೋಪಿಗಳಾದ ನೀವು ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ತಂಟೆ ತೆಗೆದು**, 1** ರಿಂದ **6** ನೇ ಆರೋಪಿಗಳಾದ ನೀವುಗಳು ಚಾ.ಸಾ.**1** ರವರ ಜಮೀನಿಗೆ ನಿರ್ಮಿಸಿದ್ದ ಬೇಲಿ ಕಾಂಪೌಂಡನ್ನು ಕಿತ್ತುಹಾಕುತ್ತಿದ್ದು ಚಾ.ಸಾ.**1** ಕೇಳಲು ಹೋದಾಗ ಸೂಳೆಮಗನೆ**,** ಬೋಳಿಮಗನೆ ಇತ್ಯಾದಿ ಅವಾಚ್ಯಶಬ್ದಗಳಿಂದ ಬೈದು ಶಾಂತಿ ಭಂಗವನ್ನುಂಟು ಮಾಡಿ**,** ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **504** ಸಹವಾಚಕ ಕಲಂ**.149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸುತ್ತಾರೆಯೇ**?**

**5.** ಮೇಲೆ ಹೇಳಿದ ದಿನಾಂಕ**,** ಸಮಯ ಹಾಗೂ ಸ್ಥಳದಲ್ಲಿ**,** ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ತಂಟೆ ತೆಗೆದು**, 1** ರಿಂದ **6** ನೇ ಆರೋಪಿಗಳಾದ ನೀವುಗಳು ಚಾ.ಸಾ.**1** ರವರಿಗೆ ಬೇಲಿ ಗಿಡದಲ್ಲಿ ಹಾಕಿ ಸುಟ್ಟು ಹಾಕುವುದಾಗಿ ಪ್ರಾಣ ಬೆದರಿಕೆ ಪ್ರಾಣಬೆದರಿಕೆ ಹಾಕಿರುತ್ತೀರಿ ಪ್ರಾಣ ಬೆದರಿಕೆ ಪ್ರಾಣಬೆದರಿಕೆ ಹಾಕಿರುತ್ತೀರಿ ಎಂದು ಪ್ರಾಣ ಬೆದರಿಕೆಯನ್ನು ಹಾಕಿರುವುದರಿಂದ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ**.506** ಸಹ ಕಲಂ**.149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸುತ್ತಾರೆಯೇ**?**

**6.** ಯಾವ ಆದೇಶ **?**

**9.** ನ್ಯಾಯಾಲಯದ ಮುಂದಿರುವ ಸಾಕ್ಷ್ಯಾದಾರಗಳು ಮತ್ತು ಉಭಯ ಪಕ್ಷದವರ ವಾದ - ವಿವಾದಗಳ ಹಿನ್ನೆಲೆಯಲ್ಲಿ ಮೇಲಿನ ಅಂಶಗಳನ್ನು ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ ನಂ.1 : **ನಕಾರಾತ್ಮಕವಾಗಿ**

ಅಂಶ ನಂ.2 : **ನಕಾರಾತ್ಮಕವಾಗಿ**

ಅಂಶ ನಂ.3 : **ನಕಾರಾತ್ಮಕವಾಗಿ**

ಅಂಶ ನಂ.4 : **ನಕಾರಾತ್ಮಕವಾಗಿ**

ಅಂಶ ನಂ.5 : **ನಕಾರಾತ್ಮಕವಾಗಿ**

ಅಂಶ ನಂ.6 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ

**:: ಕಾರಣಗಳು ::**

**10. ಅಂಶ 1 ರಿಂದ 5 :-** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸಾಕ್ಷ್ಯಗಳ ಪುನರಾವರ್ತನೆಯನ್ನು ತಡೆಗಟ್ಟುವುದಕ್ಕೋಸ್ಕರ ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲು ಇಚ್ಚಿಸುತ್ತೇನೆ.

**11.** ಅಭಿಯೋಜನಾ ಪ್ರಕರಣದ ಪ್ರಕಾರ ದಿನಾಂಕ **21/11/2014** ರಂದು ಬೆಳಿಗ್ಗೆ **8.00** ಗಂಟೆಯಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಗೊಳಪಡುವ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಸರಹದ್ದು ಜಿನ್ನಾಗರ ಗ್ರಾಮದಲ್ಲಿ **1** ರಿಂದ **6** ನೇ ಆರೋಪಿಗಳು ಏಕೋದ್ದೇಶದಿಂದ ಗುಂಪುಕಟ್ಟಿಕೊಂಡು ಚಾ.ಸಾ.**1** ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಜಮೀನಿಗೆ ನಿರ್ಮಿಸಿದ್ದ ಬೇಲಿ ಕಾಂಪೌಂಡನ್ನು ಕಿತ್ತುಹಾಕುತ್ತಿದ್ದು ಚಾ.ಸಾ.**1** ಕೇಳಲು ಹೋದಾಗ ಸೂಳೆಮಗನೆ, ಬೋಳಿಮಗನೆ ಇತ್ಯಾದಿ ಅವಾಚ್ಯಶಬ್ದಗಳಿಂದ ಬೈದು, ಬೇಲಿ ಗಿಡದಲ್ಲಿ ಹಾಕಿ ಸುಟ್ಟು ಹಾಕುವುದಾಗಿ ಪ್ರಾಣ ಬೆದರಿಕೆ ಪ್ರಾಣಬೆದರಿಕೆ ಹಾಕಿರುತ್ತೀರಿ ಎಂದು ಆರೋಪಿತರು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. **143, 147, 447, 504, 506** ಸಹವಾಚಕ **149** ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಆಪಾದಿಸಲಾಗಿದೆ.

**12.** ಈ ಪ್ರಕರಣವನ್ನು ಸಾಬೀತು ಪಡಿಸಲು ಅಭಿಯೋಜನೆಯವರು ದೋಷರೋಪಣಾ ಪಟ್ಟಿಯಲ್ಲಿ ಹೆಸರಿಸಿರುವ ಸಾಕ್ಷಿದಾರರ ಪೈಕಿ ಪಿರ್ಯಾದುದಾರರನ್ನು ಈ ಪ್ರಕರಣದಲ್ಲಿ ಈ ಪ್ರಕರಣದಲ್ಲಿ ಚಾಸಾ-**1** ರವರನ್ನು ಪ್ರಾಸಾ-**1** ಎಂದು ವಿಚಾರಣೆ ಮಾಡಿರುತ್ತಾರೆ. ಮುಂದುವರೆದು, ದೂರನ್ನು ನಿಪಿ.**1** ಎಂದು, ಪ್ರಾಸಾ-

1 ರವರ ಸಹಿಯನ್ನು ನಿಪಿ.1(ಎ) ಎಂದು, ಪಂಚನಾಮೆಯನ್ನು ನಿಪಿ.2 ಎಂದು, ಪ್ರಾಸಾ-1 ರವರ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಿಕೊಂಡಿರುತ್ತಾರೆ.

**13.** ಫಿರ್ಯಾದುದಾರ/ನೊಂದ ಸಾಕ್ಷಿದಾರರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅವರು ಪಿರ್ಯಾದಿನಲ್ಲಿರುವ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಪ್ರಾಸಾಃ 1 ರವರಾದ ಮಂಜುನಾಥ ತಮ್ಮ ಮುಖ್ಯ ವಿಚಾರಣೆಯಲ್ಲಿ, ನನಗೆ ಆರೋಪಿಗಳ ಪರಿಚಯ ಇರುತ್ತದೆ. ಆರೋಪಿಗಳು ನಮ್ಮ ಊರಿನವರಾಗಿರುತ್ತಾರೆ. ಆರೋಪಿಗಳು ಗುಂಪು ಕಟ್ಟಿಕೊಂಡು ನಮ್ಮ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿರುವುದಿಲ್ಲ, ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಆರೋಪಿಗಳ ವಿರುದ್ಧ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಪೋಲಿಸರು ಎರಡು ಕಾಗದಗಳಿಗೆ ಸಹಿ ಮಾಡಿ ಎಂದು ಹೇಳಿದ ಕಾರಣ ನಾನು ಎರಡು ಕಾಗದಗಳಿಗೆ ನನ್ನ ಸಹಿ ಹಾಕಿರುತ್ತೇನೆ ಎಂದು ಹೇಳಿ ಅಭಿಯೋಜನಾ ಪ್ರಕರಣವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದಾರೆ. ಮಾನ್ಯ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯೊಂದಿಗೆ ಪಾಟೀ ಸವಾಲು ಮಾಡಿರುತ್ತಾರೆ. ಆದರೆ ಪ್ರಕರಣಕ್ಕೆ ಅನುಕೂಲಕರವಾದ ಪೂರಕ ಸಾಕ್ಷ್ಯವನ್ನು ಹೊರಗೆಳೆಯಲು ವಿಫಲರಾಗಿದ್ದಾರೆ.

**14.** ಎಲ್ಲಾ ಕಾರಣಗಳಿಂದಾಗ ನಿಪಿ.1 ರಲ್ಲಿರುವ ದೂರನ್ನು ಸಾಬೀತು ಪಡಿಸಿಲ್ಲವೆಂದು ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ. ಪ್ರಮುಖ ಸಾಕ್ಷಿದಾರರಾದ ಪ್ರಾಸಾ - 1 ರವರನ್ನು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ಕೊಟ್ಟಿಲ್ಲವಾದ್ದರಿಂದ ಮತ್ತು ನಿಪಿ.1 ಮತ್ತು ನಿಪಿ.2 ರಲ್ಲಿರುವ ಅಂಶಗಳನ್ನು ಅಲ್ಲಗಳೆದಿರುವುದರಿಂದ ಮತ್ತು ಮುಖ್ಯ ಸಾಕ್ಷಿದಾರರಾದ ಪ್ರಾಸಾ - 1 ರವರು ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಇನ್ನುಳಿದ ಔಪಚಾರಿಕ ಸಾಕ್ಷಿದಾರರ ಸಾಕ್ಷ್ಯದಿಂದ ಯಾವುದೇ ಉಪಯೋಗವಾಗುವುದಿಲ್ಲವೆಂದು ಅಭಿಪ್ರಾಯಪಟ್ಟು ಉಳಿಕೆ ಸಾಕ್ಷಿದಾರರನ್ನು ಪ್ರಕರಣದಿಂದ ಕೈ ಬಿಡಲಾಗಿದೆ.

**15.** ಈ ನೆಲದ ಕಾನೂನಿನ್ವಯ ಆರೋಪಿತರ ವಿರುದ್ಧ ಆರೋಪಿಸಲಾದ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯವರದ್ದಾಗಿದೆ. ಈ ರುಜುವಾತಿನ ಭಾರವನ್ನು ಇಳಿಸಲು ಸೂಕ್ತ ಸಾಕ್ಷ್ಯಧಾರಗಳನ್ನು ಒದಗಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ನ್ಯಾಯಾಲಯದ ಮುಂದಿರುವ ದಾಖಲೆಗಳು ಮತ್ತು ಸಾಕ್ಷ್ಯದ ಮೂಲಕಭಾರತೀಯ ದಂಡ ಸಂಹಿತೆ ಕಲಂ.

**143, 147, 447, 504, 506** ಸಹವಾಚಕ **149** ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳ ಅಂಶಗಳನ್ನು ಸಂಶಯಾತೀತವಾಗಿ ಸಾಬೀತು ಪಡಿಸಲು ಅಭಿಯೋಜನೆಯು ವಿಫಲವಾಗಿದೆ ಎಂದು ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ. ಆದಕಾರಣ ಸಂಶಯದ ಲಾಭವನ್ನು ಆರೋಪಿಗಳಿಗೆ ನೀಡುವುದರ ಮೂಲಕ ಮೇಲ್ಕಂಡ ಅಂಶ **1** ರಿಂದ **5** ಅನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**16.** ಅಂಶ**-6-** ಅಂಶ**-1** ರಿಂದ **5** ರ ವಿಸ್ತೃತ ವಿವರಣೆಯ ಮೇರೆಗೆ ಅಭಿಯೋಜನೆಯ ಪರ ಸೂಕ್ತ ಸಾಕ್ಷಾಧಾರಗಳು ಲಭ್ಯವಿಲ್ಲದ ಕಾರಣ ಆರೋಪಿತರ ಅಪರಾಧವನ್ನು ಸಾಬೀತುಪಡಿಸಿರುವುದಿಲ್ಲ. ಆದುದರಿಂದ, ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ **248(1)** ರ ಮೇರೆಗೆ **1** ಮತ್ತು **2, 4** ರಿಂದ **6** ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ. **143, 147, 447, 504, 506** ಸಹವಾಚಕ **149** ರಡಿಯಲ್ಲಿನ ದಂಡನೀಯ ಅಪರಾಧಗಳಿಂದ ಬಿಡುಗಡೆಗೊಳಿಸಲಾಗಿದೆ.

ಆರೋಪಿತರ ಮತ್ತು ಜಾಮೀನುದಾರರ ಬಾಂಡಗಳನ್ನು ಹಾಗೂ ಮುಚ್ಚಳಿಕೆ ಪತ್ರವನ್ನು ರದ್ದುಪಡಿಸದೆ.

( ಸದರಿ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದ ಮೂಲಕ ನೇರವಾಗಿ ಬೆರಳಚ್ಚು ಮಾಡಿಸಿ ಓದಿ ತಿದ್ದಿ ಇಂದು ಅಂದರೆ ದಿನಾಂಕ **9 ನೇ** ಜೂನ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ. )

**Sd/-**
2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ನ್ಯಾಯಾಲಯ.,
ಹೊಸಕೋಟೆ.